ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/03/ಸಿಡಿಟಿಪಿ/2012-13 1146

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ:19-04-2017.

-: ಸುತ್ತೋಲೆ :-

ವಿಷಯ:- CDTP ಯೋಜನೆಯಡಿ ಕೌಶಲ್ಯಾಭಿವೃದ್ಧಿ ತರಬೇತಿ ಪಡೆದವರ ವಿವರ ನೀಡುವ ಕುರಿತು.

*****

ಮೇಲೆ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಭಾರತ ಸರ್ಕಾರ ಇವರ ಧನ ಸಹಾಯದಿಂದ ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ನಡೆಸಲಾಗುತ್ತಿರುವ CDTP ಯೋಜನೆಯ " Skill Development Training Programme" ನಡಿ 2016-17ನೇ ಸಾಲಿನಲ್ಲಿ ನಡೆಸಲಾಗಿರುವ ತರಬೇತಿಗಳ ಹಾಗೂ ತರಬೇತಿ ಪಡೆದವರ ಸಂಖ್ಯಾವಾರು ವಿವರಗಳನ್ನು ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯವರಿಗೆ ತುರ್ತಾಗಿ ನೀಡಬೇಕಾಗಿದೆ.

ಆದುದರಿಂದ 2016-17ನೇ ಸಾಲಿನಲ್ಲಿ ದಿನಾಂಕ: 01-04-2016 ರಿಂದ 31-3-2017ರವರೆಗೆ ನಡೆಸಲಾದ ತರಬೇತಿಯ ಹೆಸರು ಮತ್ತು ತರಬೇತಿ ಪಡೆದವರ ಸಂಖ್ಯಾವಾರು ವಿವರಗಳನ್ನು ಡಿಟಿಇ ವೆಬ್ ಸೈಟ್‌ನಲ್ಲಿರುವ ಸದರಿ ಶೀರ್ಷಿಕೆಯೊಂದಿಗಿನ https://goo.gl/forms/TsjgwiANbr6Tyh2d2 ಲಿಂಕ್‌ನಲ್ಲಿ ದಿನಾಂಕ: 28-04-2017ರೊಳಗೆ ಭರ್ತಿ ಮಾಡಲು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

19/4/17

ಇವರಿಗೆ:

1. ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.